# ಖಳನಾಯಕಿ ನಾನಾಗಲಾರೆ!

## ದೀಪಿಕಾ ಸಿ.ಎ.

### ಸ್ಟಾರ್‌ಸುವರ್ಣದ ‘ಆರತಿಗೊಬ್ಬ ಕೀರ್ತಿಗೊಬ್ಬ’ದ ಆರತಿ



◆ **ನಟಿ ಆಗದಿದ್ದರೆ ಏನಾಗಬೇಕು ಎನ್ನುವ ಆಲೋಚನೆ ಇತ್ತು?**

ಆರಂಭದಿಂದಲೇ ಕಲಾವಿದೆ ಆಗಬೇಕು ಎಂದು ಕನಸು ಕಂಡಿದ್ದೆ. ಮೂರು ವರ್ಷದವಳಿದ್ದಾಗಲೇ ವೀಣಾವಾದನ ಅಭ್ಯಾಸವನ್ನು ಆರಂಭಿಸಿದ್ದೆ. ನನ್ನ ತಂದೆ ವೀಣೆ ವಾದಕರು. ಸೋದರತ್ತೆ ಡಾನ್ಸ್ ಕಲಿಸುತ್ತಿದ್ದರು. ವೃತ್ತಿಯಾಗಿ ಏನನ್ನೇ ಮಾಡಿದ್ದರೂ ನನ್ನ ಕಲಾ ಪ್ರವೃತ್ತಿಯಲ್ಲಿ ಯಾವುದೇ ಬದಲಾವಣೆ ಆಗುತ್ತಿರಲಿಲ್ಲ. ವೀಣೆಯನ್ನು ವೃತ್ತಿಪರವಾಗಿಯೇ ತೆಗೆದುಕೊಂಡಿದ್ದೆ. ಐದು ನೂರಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ವೀಣೆ ನುಡಿಸಿದ್ದೇನೆ. ‘ಕುಲವಧು’ ನನ್ನ ಮೊದಲ ಧಾರಾವಾಹಿ. ನನಗೆ ಸಿಕ್ಕ ಎರಡನೇ ಅವಕಾಶ ಇದು. ಈ ಎರಡರಲ್ಲೂ ಭಿನ್ನ ಪಾತ್ರಗಳಿದ್ದು ತೃಪ್ತಿಯನ್ನು ತಂದುಕೊಟ್ಟಿವೆ. ಹೊಸ ಪರಿಚಯದಲ್ಲೇ ಕುಲವಧು ನನಗೆ ಒಳ್ಳೆಯ ಹೆಸರು ತಂದುಕೊಟ್ಟಿದೆ. ಸುಮಾರು ಐದಾರು ವರ್ಷ ನಡೆಯಿತು.

◆ **ಶಾಸ್ತ್ರೀಯ ಮತ್ತು ಸೀರಿಯಲ್ ಕಲೆಯ ನಿಮ್ಮ ಅನುಭವವನ್ನು ಹೇಳಿ...**

ಧಾರಾವಾಹಿಯಲ್ಲಿ ರೀ ಟೇಕ್‌ಗೆ ಮತ್ತೊಂದು ಅವಕಾಶ ಇರುತ್ತದೆ. ಅಂದರೆ ನಾವೇನಾದರೂ ತಪ್ಪು ಮಾಡಿದರೆ ಅದನ್ನು ಸರಿಪಡಿಸಲು ಮತ್ತೊಮ್ಮೆ ಪ್ರಯತ್ನಿಸುತ್ತೇವೆ. ಚಿತ್ರೀಕರಣ ಮುಗಿದ ನಂತರವೂ ಎಡಿಟ್ ಮಾಡುವಾಗ ಕೂಡ ತಿದ್ದಲು ತಾಂತ್ರಿಕ ನೆರವು ಇದೆ. ಶಾಸ್ತ್ರೀಯ ಕಲೆಯನ್ನು ರಂಗದ ಮೇಲೆ ಶೋ ನೀಡುವ ಮೂಲಕ ನೇರವಾಗಿ ಪ್ರೇಕ್ಷಕರನ್ನು ತಲುಪುತ್ತೇವೆ. ಇಂತಹ ಕಾರ್ಯಕ್ರಮದಲ್ಲಿ ತಿದ್ದಿಕೊಳ್ಳುವ ಅವಕಾಶ ಇರುವುದಿಲ್ಲ. ಏನಾದರೂ ತಪ್ಪು ಘಟಿಸಿದರೆ ಅದು ತಪ್ಪಾಗಿಯೇ ತಲುಪುತ್ತದೆ. ಈ ಕಾರಣಕ್ಕೆ ತಾಲೀಮು ಹೆಚ್ಚು ಮಾಡಬೇಕಾಗುತ್ತದೆ. ರಂಗ ಕಲಾವಿದರ ಅಭಿನಯ ಕೊನೆಯ ಸಾಲಿನ ಪ್ರೇಕ್ಷಕನಿಗೂ ಕಾಣಬೇಕು– ಕೇಳಿಸಬೇಕು. ಧ್ವನಿ–ನೋಟದಲ್ಲಿ ಸ್ಪಷ್ಟತೆ ಇರಬೇಕು. ರಂಗವೇರುವ ಮುನ್ನ ಸಂಪೂರ್ಣ ಸಿದ್ಧತೆ ಮಾಡಿಕೊಂಡಿರುತ್ತೇವೆ. ಧಾರಾವಾಹಿ ಅಂದಮಾತ್ರಕ್ಕೆ ನೇಮ್ ಅಂಡ್ ಫೇಮ್ ಇರುತ್ತದೆ ಎಂದು ಭಾವಿಸುವುದೂ ತಪ್ಪು. ಅಲ್ಲೂ ಸಾಕಷ್ಟು ತೊಂದರೆಗಳು ಇರುತ್ತವೆ. ಎಲ್ಲದಕ್ಕೂ ಅದರದೇ ಆದ ಸಿದ್ಧತೆ ಇರುತ್ತದೆ. ವೀಕ್ಷಕ ವರ್ಗವೂ ಬೇರೆ ಬೇರೆ ಇದ್ದರೂ ಅವರ ಮನಸ್ಸು ಗೆಲ್ಲಬೇಕು ಅಂದರೆ ಕೆಲಸದ ಬದ್ಧತೆ ಎರಡರಲ್ಲೂ ಇದ್ದೇ ಇರುತ್ತದೆ.

◆ **ನಿಮ್ಮ ಕುಟುಂಬದ ಬೆಂಬಲ ಹೇಗಿದೆ?**

ತಂದೆ ಆನಂದಕುಮಾರ್, ತಾಯಿ ಹರಿಣಿ, ನನ್ನ ಸೋದರತ್ತೆ ಕುಮುದಿನಿ. ನನ್ನ ಕಲಾಭಿವ್ಯಕ್ತಿಗೆ ಅವರ ಪಾತ್ರವೇ ಬೆನ್ನೆಲುಬು. ಇವರ ಜೊತೆ ಅಜ್ಜಿ ಕೂಡ ಪ್ರೋತ್ಸಾಹಿಸುತ್ತಿದ್ದರು. ಮದುವೆ ಆದ ನಂತರ ಕೂಡ ಅತ್ತೆ ಮನೆಯಲ್ಲೂ ಒಳ್ಳೆಯ ಪ್ರೋತ್ಸಾಹ ಇದೆ. ನನ್ನ ಮಾವ ಅಭಿನಂದನ್, ಅತ್ತೆ ಪದ್ಮಶ್ರೀ ಚಿತ್ರೀಕರಣಕ್ಕೆ ಹೋಗುವಾಗ ನನ್ನ ಜೊತೆ ಯಾರೂ ಇಲ್ಲ ಎಂದರೆ ನಮ್ಮ ಅತ್ತೆಯೇ ಬರುತ್ತಾರೆ. ನನ್ನ ಪತಿ ಆಕಾಶ್ ಅವರು ಕುಲವಧುವಿನಲ್ಲಿ ಇದ್ದರು. ಅವರನ್ನು ಮೆಚ್ಚಿ ಮನೆಯವರ ಒಪ್ಪಿಗೆಯಿಂದ ಮದುವೆ ಆಗಿದ್ದೇವೆ. ಈಗ ‘ಗಿರಿಜಾ ಕಲ್ಯಾಣ’ ಮತ್ತು ತೆಲುಗು ಧಾರಾವಾಹಿಯಲ್ಲಿ ಅವರು ನಟಿಸುತ್ತಿದ್ದಾರೆ.

◆ **ಜನಪ್ರಿಯತೆ ಮತ್ತು ಸಾಮಾನ್ಯ ಮಹಿಳೆಯಾಗಿ ನೀವು...**

ಅಭಿನಯಕ್ಕೆ ಶಾಸ್ತ್ರೀಯ ನೃತ್ಯ ನನಗೆ ತುಂಬ ಸಹಾಯ ಮಾಡಿದೆ. ನಟನೆಯನ್ನು ಕಲಿಯದೆ ಲೀಲಾಜಾಲವಾಗಿ ನವರಸಗಳನ್ನೂ ಪ್ರಕಟಿಸಲು ಸಾಧ್ಯ ಆಗಿರುವುದು ನನ್ನ ಶಾಸ್ತ್ರೀಯ ಕಲಾಭ್ಯಾಸ. ಭಾವ ಪ್ರಕಟಣೆಗೆ ಡಾನ್ಸ್–ಡ್ರಾಮಾದ ಅನುಭವ ತುಂಬ ಸಹಾಯ ಮಾಡುತ್ತದೆ. ಚಿಕ್ಕ ಬದಲಾವಣೆ ಮಾಡಿಕೊಂಡರೆ ಸಾಕು. ಕ್ಯಾಮೆರಾ ಎದುರಿಸುವುದು ನನಗೂ ಗೊತ್ತಿರಲಿಲ್ಲ. ನಾಟಕೀಯವಾಗಿ ಅಳಲು ಬರುತ್ತಿರಲಿಲ್ಲ ಅದನ್ನು ಇಲ್ಲಿ ಕಲಿತಿದ್ದೇನೆ.

ದಿನವೂ ಹೊಸತನ್ನು ಕಲಿಯಲು ಸಾಧ್ಯವಾಗಿದೆ. ಸೆಲೆಬ್ರಿಟಿ ಲೈಫ್ ನನಗೆ ಬಂದಿದೆ ಅಂದರೆ, ಅದು ಜನ ಬೆಂಬಲದಿಂದ. ಅವರು ನಮ್ಮ ಕಲೆಯನ್ನು ನೋಡಿ ಪ್ರೋತ್ಸಾಹಿಸಿದರೆ ಅದಕ್ಕೆ ಬೆಲೆ. ನಾವು ಎಷ್ಟೇ ಕಷ್ಟಪಟ್ಟು ಮಾಡಿದರೂ ಜನ ಬೆಂಬಲಿಸಲಿಲ್ಲ ಎಂದರೆ ಯಾವ ಪ್ರಯೋಜನವೂ ಇಲ್ಲ. ನಮ್ಮ ಕಲೆಗೊಂದು ಮೌಲ್ಯ ಇರುವುದು ಪ್ರೇಕ್ಷಕರ ಪ್ರೋತ್ಸಾಹದಲ್ಲಿ. ಅಭಿಮಾನ ಕೂಡ ಅವರು ಪ್ರೀತಿಯಿಂದ ಕೊಟ್ಟ ಅವಕಾಶ. ಎಲ್ಲಾದರೂ ಜನ ಗುರುತಿಸಿ ಮಾತನಾಡಿಸಿದಾಗ ಖುಷಿಯಾಗುತ್ತದೆ. ನನ್ನ ಪಾತ್ರ ತಲುಪಿದೆ ಎಂದು ಸಮಾಧಾನವಾಗುತ್ತದೆ.

◆ **ಆರತಿಗೊಬ್ಬ ಕೀರ್ತಿಗೊಬ್ಬದ ಬಗ್ಗೆ ಹೇಳುವುದಾದರೆ...**

ನಾನು ಮೊದಲ ಬಾರಿಗೆ ದ್ವಿಪಾತ್ರದ ಕಥೆಯಲ್ಲಿ ನಟಿಸುತ್ತಿದ್ದೇನೆ. ಒಂದು ಪಾತ್ರಕ್ಕೆ ನಾನು ಜೋಡಿಯಾದರೆ, ಮತ್ತೊಂದಕ್ಕೆ ಕೀರ್ತಿ ಜೋಡಿ. ದ್ವಿಪಾತ್ರ ಹೇಗೆ ಮಾಡುತ್ತಾರೆ ಎನ್ನುವುದೇ ಗೊತ್ತಿರಲಿಲ್ಲ. ಈಗ ಅದೆಲ್ಲ ಗೊತ್ತಾಗುತ್ತದೆ. ಹಳ್ಳಿಯ ಮುಗ್ಧ ಅನಕ್ಷರಸ್ಥ ಹುಡುಗಿಯಾಗಿದ್ದೇನೆ. ‘ಕುಲವಧು’ವಿನಲ್ಲಿ ಮನೆಗೆಲಸದವಳಾದರೂ ಓದಿದವಳಾಗಿದ್ದೆ. ‘ಚಿಟ್ಟೆ’, ‘ನನ್ನ ಮಗಳು ಹಿರೋಯಿನ್’ ಸಿನಿಮಾದಲ್ಲೂ ನಟಿಸಿದ್ದೇನೆ. ಎಲ್ಲ ಪಾತ್ರಗಳೂ ಚಾಲೆಂಜಿಂಗ್ ಆಗಿವೆ. ತೊದಲಿ ಪಾತ್ರಕ್ಕೆ ಅವಕಾಶ ಸಿಕ್ಕಿದ್ದು ವಿಭಿನ್ನ ಅನುಭವವನ್ನು ನನಗೆ ನೀಡಿದೆ. ನೆಗೆಟಿವ್ ಪಾತ್ರವನ್ನು ಎಂದೂ ಮಾಡಲಾರೆ. ಪಾತ್ರದಾಳದಲ್ಲಿ ಇಳಿಯುವುದರಿಂದ ವೈಯಕ್ತಿಕವಾಗಿ ನಮ್ಮನ್ನು ಪಾತ್ರವೂ ಆವರಿಸುತ್ತದೆ. ಗೊತ್ತಿಲ್ಲದಂತೆ ನಮ್ಮನ್ನೂ ಅದು ಪ್ರಭಾವಿಸುವ ಅಪಾಯವಿದೆ. ಪಾಸಿಟಿವ್ ಗುಣಗಳ ಪಾತ್ರ ಮಾತ್ರ ನನಗೆ ಇಷ್ಟ ಅದರಲ್ಲಿ ಎಂತಹ ಸವಾಲಿದ್ದರೂ ಸರಿ, ಪಾತ್ರದಲ್ಲಿ ಏನಾದರೂ ವಿಶೇಷತೆ ಇದ್ದರೆ ಇನ್ನೂ ಚೆಂದ.

◆ **ಕಲಾವಿದನಾಗಲು ಸಿದ್ಧತೆ ಹೇಗಿರಬೇಕು?**

ಹೊಸದಾಗಿ ಸಿನಿಮಾ– ಧಾರಾವಾಹಿ ಪ್ರವೇಶಿಸಬೇಕು ಎನ್ನುವವರಿಗೂ ಅವಕಾಶ ಸಾಕಷ್ಟು ಇವೆ. ತಮ್ಮಲ್ಲಿ ಇದ್ದ ಕಲಾ ಬಯಕೆಯನ್ನು ಅವರು ವೃದ್ಧಿಸಿಕೊಳ್ಳುತ್ತಿರಬೇಕು. ಎಲ್ಲರಿಗೂ ಒಳ್ಳೆಯ ಅವಕಾಶ ಸಿಕ್ಕೇ ಸಿಗುತ್ತವೆ. ಸಿನಿಮಾಕ್ಕೆ ಪೂರಕವಾಗುವಂತೆ ಡ್ರಾಮಾ– ಡಾನ್ಸ್... ಏನಾದರೂ ಒಂದು ಕಲಾ ಪ್ರಕಾರದ ಕಲಿಯಲು ತೊಡಗಿಕೊಳ್ಳಬೇಕು. ಯಾವತ್ತೂ ಕಲಾವಿದನಿಗೆ ವಿನಯ ಇರಬೇಕು. ಸಮಯ ಸಂದರ್ಭದಕ್ಕೆ ಹೊಂದಿಕೊಂಡು ಬದ್ಧತೆಯಿಂದ ಕೆಲಸ ಮಾಡುವ ಆಸಕ್ತರಿಗೆ ಅವಕಾಶ ಇದ್ದೇ ಇದೆ ಎನ್ನುವುದು ನನ್ನ ಅಭಿಪ್ರಾಯ.

■ **ರಾಘವೇಂದ್ರ ಕೆ.**